ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03

ಸಂಖ್ಯೆ:ಕ್ಯೂ5/ಕೆ.ಓ.ಎಸ್ ಪೂರಕ ಪರೀಕ್ಷೆ/ಅಕ್ಟೋಬರ್-2021/30/2021-22 ದಿನಾಂಕ:08/10/2021

## ಸುತ್ತೋಲೆ

**ವಿಷಯ:** ಅಕ್ಟೋಬರ್-2021 ರ ಮಾಹೆಯಲ್ಲಿ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ, (ಕೆ.ಓಎಸ್) ಪೂರಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಿ.ಎನ್.ಆರ್, ಎ.ಎಂ.ಎಲ್, ನಾಮಾಯಾದಿ ಪಟ್ಟಿ, ಇವುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ಬಗ್ಗೆ.

******

ಅಕ್ಟೋಬರ್-2021 ರ ಮಾಹೆಯ ಕರ್ನಾಟಕ ಮುಕ್ತ ಶಾಲೆ, (ಕೆ.ಓ.ಎಸ್) ಪೂರಕ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಈಗಾಗಲೇ Online ಮೂಲಕ ಕಲಿಕಾ ಕೇಂದ್ರಗಳ ಲಾಗಿನ್‌ನಲ್ಲಿ ಲಭ್ಯ ಮಾಡಲಾಗಿದೆ. ಈಗ ಮಂಡಳಿಯ ಜಾಲತಾಣದಲ್ಲಿ ಸಿ.ಎನ್.ಆರ್, ಎ.ಎಂ.ಎಲ್, ನಾಮಾಯಾದಿ ಪಟ್ಟಿಗಳನ್ನು ಅಪ್ ಲೋಡ್ ಮಾಡಲಾಗಿದ್ದು, ಡಯಟ್ ಲಾಗಿನ್‌ನ USER ID ಮತ್ತು PASS WORD ಬಳಸಿ ಡೌನ್ ಲೋಡ್ ಮಾಡಿಕೊಳ್ಳಲು ತಿಳಿಸಿದೆ. ಸಿ.ಎನ್.ಆರ್ ಮತ್ತು ಎ.ಎಂ.ಎಲ್, ನಾಮಾಯಾದಿ ಪಟ್ಟಿಗಳನ್ನು ಡೌನ್ ಲೋಡ್ ಮಾಡಿಕೊಂಡು ಈ ಕೆಳಕಂಡ ಅಂಶಗಳಂತೆ ಪರಿಶೀಲಿಸುವುದು. ಒಂದು ವೇಳೆ ಏನಾದರೂ ತಪ್ಪುಗಳು ಕಂಡು ಬಂದಲ್ಲಿ ಕೂಡಲೇ ಶಾಖಾಧಿಕಾರಿಗಳು ಕ್ಯೂ ಶಾಖೆ ರವರ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವುದು.

1. ಸಿ.ಎನ್.ಆರ್, ಎ.ಎಂ.ಎಲ್ ಹಾಗೂ ನಾಮಯಾದಿ ಪಟ್ಟಿಗಳು ಮಂಡಳಿಯ ಜಾಲತಾಣ sslc.karnataka.gov.in ನಲ್ಲಿ ಲಭ್ಯವಿದೆ.
2. ಲಾಗಿನ್ ಆದ ನಂತರ ಮೊದಲು ಆಯಾ ಡಯಟ್ ಪ್ರಾಂಶುಪಾಲರು/ನೋಡಲ್ ಅಧಿಕಾರಿಗಳು ಡಯಟ್ ಲಾಗಿನ್‌ನ USER ID (ಡಯಟ್ ಸಂಕೇತ) PASS WORD (USER ID) ಬಳಸಿ ಎಲ್ಲಾ ಅಭ್ಯರ್ಥಿಗಳ ಸಿ.ಎನ್.ಆರ್ ಎ.ಎಂ.ಎಲ್ ಹಾಗೂ ನಾಮಯಾದಿ ಪಟ್ಟಿಗಳನ್ನು ಡೌನ್ ಲೋಡ್ ಮಾಡಿಕೊಂಡು ಪರಿಶೀಲಿಸಬೇಕು.
3. ಪರೀಕ್ಷಾ ಕೇಂದ್ರಗಳಿಗೆ ಅಗತ್ಯವಾದ ಕೇಂದ್ರ ನಾಮಯಾದಿ ಪಟ್ಟಿ (ಸಿ.ಎನ್.ಆರ್) ಮತ್ತು ಎ.ಎಂ.ಎಲ್ (ಹಾಜರಾತಿ ಮತ್ತು ಅಂಕಗಳ ತ:ಖ್ತೆ) ಹಾಗೂ ನಾಮಯಾದಿ ಪಟ್ಟಿ (ಎನ್.ಆರ್) ಗಳನ್ನು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಬೇಕು
4. **ಸಿ.ಎನ್.ಆರ್ ಮತ್ತು ಎ.ಎಂ.ಎಲ್, ನಾಮಾಯಾದಿ ಪಟ್ಟಿ (ಎನ್.ಆರ್) ಗಳನ್ನು ಡಯಟ್ ಲಾಗಿನ್‌ನಿಂದ ಡೌನ್ ಲೋಡ್ ಮಾಡುವ ವಿಧಾನ:**
   - sslc.karnataka.gov.in → Login → Other Exam → K.O.S Examination → Diet Login → Down load CNR
   - sslc.karnataka.gov.in → Login → Other Exam → K.O.S Examination → Diet Login → Down load AML
   - sslc.karnataka.gov.in → Login → Other Exam → K.O.S Examination → Diet Login → Down load NR
5. ನಿಮ್ಮ ಪರೀಕ್ಷಾ ಕೇಂದ್ರದ ಅಭ್ಯರ್ಥಿಗಳ ಸಂಖ್ಯೆಗೆ ಅನುಸಾರ ಸಿ.ಎನ್.ಆರ್ ಮತ್ತು ಎ.ಎಂ.ಎಲ್ ಸಂಖ್ಯೆಗಳು ಸರಿ ಹೊಂದುತ್ತಿವೆಯೇ? ಒಂದು ವೇಳೆ ಸರಿ ಹೊಂದದಿದ್ದಲ್ಲಿ ಯಾವ ಅಭ್ಯರ್ಥಿಯ ಸಿ.ಎನ್.ಆರ್ ಮತ್ತು ಎ.ಎಂ.ಎಲ್ ಬಂದಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಅಗತ್ಯ ಕ್ರಮಕ್ಕಾಗಿ ಸಮರ್ಥನೆಯೊಂದಿಗೆ/ದಾಖಲೆಗಳನ್ನು ಕಳುಹಿಸಿಕೊಡುವುದು.
6. ಪರೀಕ್ಷೆ ಮುಗಿದ ನಂತರ ಅದೇ ದಿನದಂದು ಎ.ಎಂ.ಎಲ್ ನಲ್ಲಿ ನಿಗಧಿತ ಕಾಲಂಗಳಲ್ಲಿ ( Mall practice, Absent) ನಮೂದಿಸಿ, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು, ತುಮಕೂರು ಜಿಲ್ಲೆ ರವರಿಗೆ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ರವಾನಿಸುವುದು.
7. ಯಾವುದೇ ಅಭ್ಯರ್ಥಿಯ ಭಾವಚಿತ್ರ ಬದಲಾವಣೆಗೆ ಸಂಬಂಧಿಸಿದಂತೆ, ಪರೀಕ್ಷೆಗೆ ಮುಂಚೆ ಮಾಡಲಾದ ಬದಲಾವಣೆಗಳನ್ನು ಮಾತ್ರ ಮಂಡಳಿಯು ಪರಿಗಣಿಸುತ್ತದೆ. ಕೇಂದ್ರ ನಾಮಪಟ್ಟಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದೆ ಇದ್ದಲ್ಲಿ ನಾಮಪಟ್ಟಿಯಲ್ಲಿರುವ ಭಾವಚಿತ್ರದ ವಿದ್ಯಾರ್ಥಿಯೇ ನೈಜ ವಿದ್ಯಾರ್ಥಿ ಎಂದು ಪರಿಗಣಿಸಲಾಗುವುದು. ಪರೀಕ್ಷಾ ನಂತರದಲ್ಲಿ ಬರುವ ಅಭ್ಯರ್ಥಿಗಳ ಭಾವಚಿತ್ರ ಬದಲಾವಣೆ ಕುರಿತ ಯಾವುದೇ ಮನವಿಗಳನ್ನು ಮಂಡಳಿ ಪುರಸ್ಕರಿಸುವುದಿಲ್ಲ. ಇದಕ್ಕೆ ಸಂಬಂಧಿಸಿದ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಹಾಗೂ ಪರೀಕ್ಷಾ ಕೇಂದ್ರದ ಅಧೀಕ್ಷಕರುಗಳು/ನೋಡಲ್ ಅಧಿಕಾರಿಗಳು ನೇರ ಜವಾಬ್ದಾರರಾಗಿರುತ್ತಾರೆ. ಬದಲಿ ವಿದ್ಯಾರ್ಥಿ ಪರೀಕ್ಷೆ ಬರೆಯಲು ಸಹಕರಿಸಿ ಪರೀಕ್ಷಾ ಅವ್ಯವಹಾರದಲ್ಲಿ

ಭಾಗಿಯಾಗಿರುತ್ತೀರೆಂದು ಪರಿಗಣಿಸಿ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು/ನೋಡಲ್ ಅಧಿಕಾರಿಗಳ ಮೇಲ ಕೆ.ಸಿ.ಎಸ್.ಆರ್ (ಸಿ.ಸಿ.ಎ) ನಿಯಮ–1957 ಮತ್ತು 1983 ರ ಕರ್ನಾಟಕ ಶಿಕ್ಷಣ ಕಾಯ್ದೆ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕಾಯ್ದೆ–1966 ರನ್ವಯ ಕ್ರಮ ಜರುಗಿಸಲಾಗುವುದು.

ಮೇಲ್ಕಂಡ ಅಂಶಗಳಂತೆ ಪರೀಕ್ಷಾ ಕೇಂದ್ರದ ಎಲ್ಲಾ ಅಭ್ಯರ್ಥಿಗಳ ಸಿ.ಎನ್.ಆರ್ ಮತ್ತು ಎ.ಎಂ.ಎಲ್ ಗಳನ್ನು ಆದ್ಯತೆ ಮೇರೆಗೆ ಕಡ್ಡಾಯವಾಗಿ ಪರಿಶೀಲಿಸಿಕೊಂಡು, ಪರೀಕ್ಷೆಯನ್ನು ಸುಗಮವಾಗಿ ಮತ್ತು ಸುಸೂತ್ರವಾಗಿ ನಡೆಸಲು ಈ ಮೂಲಕ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು ಕ್ಯೂ ಶಾಖೆ, ವಿಭಾಗ, 4ನೇ ಮಹಡಿ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003, ಮೊಬೈಲ್ ಸಂಖ್ಯೆ:9480343741 ಮಂಡಳಿಯ ದೂರವಾಣಿ ಸಂಖ್ಯೆ:080–23460525 ಇ–ಮೇಲ್ ವಿಳಾಸ: adpiqsecton@gmail.com ಸಂಪರ್ಕಿಸುವುದು.

Gi.S 12/10/2021

(ಎಸ್ ಗೀತಾ)
ನಿರ್ದೇಶಕರು,
ಇತರೆ ಪರೀಕ್ಷೆಗಳು

ಇವರಿಗೆ:

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ
2. ರಾಜ್ಯದ ಎಲ್ಲಾ ಕೆ.ಓ.ಎಸ್ ಪರೀಕ್ಷಾ ಕೇಂದ್ರಗಳ ನೋಡಲ್ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಶಾಖಾಧಿಕಾರಿಗಳು, ಗಣಕಶಾಖೆ ಇವರಿಗೆ ಈ ಸುತ್ತೋಲೆಯನ್ನು ಅಂತರ್ ಜಾಲದಲ್ಲಿ ಪ್ರಕಟಿಸುವುದು.
4. ಕಛೇರಿ ಪ್ರತಿ